# EB ದ್ವಿತೀಯ ಪಿಯುಸಿ ಪೂರ್ವಸಿದ್ಧತಾ ಪರೀಕ್ಷೆ ಜನವರಿ – 2023

## ವಿಷಯ: ಕನ್ನಡ (1)

**ಸಮಯ: 3.15 ನಿಮಿಷಗಳು** **ಅಂಕಗಳು: 100**

### ಅ: ಬಹು ಆಯ್ಕೆ ಪ್ರಶ್ನೆ ವಿಭಾಗ

**I. ಅ. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** **10 × 1 = 10**

1. ಸೀತೆಯನ್ನು ರಾವಣ ಎಲ್ಲಿರಿಸಿದ್ದನು?
   (ಅ) ಬೃಂದಾವನ (ಆ) ಅಶೋಕವನ (ಇ) ಪ್ರಮದವನ (ಈ) ಗಿರಿವನ
2. ಗುರು ಹೇಗೆ ವರ್ತಿಸಬಾರದು?
   (ಅ) ಲಘುವರ್ತನ (ಆ) ದೀರ್ಘವರ್ತನ (ಇ) ದುಷ್ಪವರ್ತನ (ಈ) ಶಿಷ್ಟವರ್ತನ
3. ಪಾಂಚಾಲಿಯೆಂದರೆ ಯಾರು?
   (ಅ) ಸೀತೆ (ಆ) ದ್ರೌಪದಿ (ಇ) ಭಾನುಮತಿ (ಈ) ಕುಂತಿ
4. ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ?
   (ಅ) ಹತ್ತಿಯ ಬೀಜ (ಆ) ನಿಂಬೆಯಬೀಜ (ಇ) ದಾಳಿಂಬೆ ಬೀಜ (ಈ) ಕಲ್ಲಂಗಡಿ ಹಣ್ಣಿನ ಬೀಜ
5. ಮಾರ್ಷ್ ವಾಲ್‌ಪರ್ಯೆಗೆ ಬಂದುದು ಯಾವಾಗ?
   (ಅ) 1870 (ಆ) 1990 (ಇ) 1790 (ಈ) 1890
6. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು?
   (ಅ) ಜೈನಧರ್ಮ (ಆ) ಪಾರ್ಶಿಕ ಧರ್ಮ (ಇ) ಯಹೂದಿ ಧರ್ಮ (ಈ) ಬೌದ್ಧ ಧರ್ಮ
7. ಕಲಾಂ ಅವರ ಆತ್ಮಚರಿತ್ರೆಯ ಹೆಸರೇನು?
   (ಅ) ವಿಂಗ್ಸ್‌ಆಫ್ ಫೈರ್ (ಆ) ನೆನಪಿನ ದೋಣಿಯಲ್ಲಿ
   (ಇ) ಕಲಾಂ ಮೇಷ್ಟ್ರು (ಈ) ಚಂದ್ರಯಾನ
8. ಕೃಷ್ಣೇಗೌಡರ ಆನೆಯ ಹೆಸರೇನು?
   (ಅ) ಗೌರಿ (ಆ) ಗೀತಾ (ಇ) ಶೌರಿ (ಈ) ಅಂಬಿಕಾ
9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು?
   (ಅ) ಸುರೇಶ (ಆ) ನರೇಶ (ಇ) ಪ್ರಕಾಶ (ಈ) ಗಣೇಶ
10. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮೆನ್ ಯಾರು?
   (ಅ) ತಿಪ್ಪಣ್ಣ (ಆ) ಕಪ್ಪಣ್ಣ (ಇ) ದುರ್ಗಪ್ಪ (ಈ) ಶಂಕರಪ್ಪ

**ಆ. ಹೊಂದಿಸಿ ಬರೆಯಿರಿ:** **5 × 1 = 5**

11.

| | | | |
|---|---|---|---|
| (ಅ) | ಪುಲಿಗೆರೆ ಸೋಮನಾಥ | (1) | ಪುರಂದರದಾಸ |
| (ಆ) | ಕರ್ನಾಟಕ ಸಂಗೀತದ ಪಿತಾಮಹ | (2) | ದ.ರಾ. ಬೇಂದ್ರೆ |
| (ಇ) | ಹಲಸಂಗಿ ಗೆಳೆಯರು | (3) | ನಾನೆಂಬ ಮಾಯೆ |
| (ಈ) | ಬೆಳಗುಜಾವ | (4) | ವ್ಯಕ್ತಿಪರ ಕವನಗಳು |
| (ಉ) | ಬಿ. ಸುಕನ್ಯಾ ಮಾರುತಿ | (5) | ಹರಹರಾ ಶ್ರೀ ಚೆನ್ನಸೋಮೇಶ್ವರ |
| | | (6) | ಹಬ್ಬಲಿ ಅವರೆ ರಸಬಳ್ಳಿ |

**ಇ. ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರ ಆರಿಸಿ ಬರೆಯಿರಿ.** **5 × 1 = 5**
**(ಬೆಳ್ಳಿ ಲೋಟ, ಚಹಾ, ರುದ್ರಪ್ಪ, ನಿಶಾಶರ್ಮಾ, ಮನೋರಮೆ)**

12. (ಕ) ಬಸಲಿಂಗನ ಜೊತೆಗಿದ್ದ ರಾಜಕಾರಣಿಯ ಹೆಸರು________
   (ಚ) ದುರಾಸೆಯ ಹುಡುಗನನ್ನು ನಿರಾಕರಿಸಿದವರು ________
   (ಟ) ಧಣಿಗಳ ದಾಂಪತ್ಯಕ್ಕೆ ______ ಮೂಕಸಾಕ್ಷಿಯಾಗಿತ್ತು.
   (ತ) ಕನ್ನಡವು ಕಸ್ತೂರಿಯಲ್ಲವೆ! ಎಂದವರು ________
   (ಪ) ಕಲಿಯುಗದ ಅಮೃತ________

### ಆ – ವಿಭಾಗ

**II. ಅ. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **4 × 2 = 8**

13. ಗಂಡೈವರು ಮೂರು ಲೋಕದ ಗಂಡರಾರು? ಹೆಸರಿಸಿ.
14. ದುರ್ಜನರ ಕಾರ್ಯ ಯಾವ ಬಗೆಯದು?
15. ಮಗು ಕಲಿತ ವಿದ್ಯೆಗಳಾವುವು?
16. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು?
17. ದನಗಳಿಗೆ ಜನಗಳಿಗೆ ಏನೇನು ಇಲ್ಲ?

**ಆ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3 × 2 = 6**

18. ಹೆಂಡ್ತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು?
19. ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?
20. ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?
21. ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ?

**ಇ. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **4 × 2 = 8**

22. ಕೃಷ್ಣೇಗೌಡನ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
23. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು?
24. ಜಬ್ಬಾರ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?

25. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?
26. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

ಇ – ವಿಭಾಗ

**III. ಅ. ಯಾವುದಾದರೂ ಎರಡು ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** 2 × 3 = 6

27. ಕದಡಿದ ಸಲಿಲಂ ತಿಳಿವಂದದೆ
28. ಹಗೆಗಳನು ಹಿಂಡಿದನು ಮನದೊಳಗೆ
29. ಮುಳುಗಿರಲಿ ಮುಪ್ಪು ಚಿಂತನದಿ

**ಆ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** 1 × 3 = 3

30. ಕನ್ನಡಿಗರು ಮೊದಲು ಕನ್ನಡಿಗರಾಗಬೇಕು.
31. ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು.

**ಇ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** 1 × 3 = 3

32. ಡ್ರೈವರಣ್ಣ ಎತ್ಲಾಗಿ ಹೋದ! ಇಲ್ಲೇ ಇದ್ದನಲ್ಲ!
33. ಕೋವಿ ಸಿಕ್ಕಿದೆ. ಆದರೆ ಹಣ ಸಿಗಲಿಲ್ಲ.

ಈ – ವಿಭಾಗ

**IV. ಅ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ.** 2 × 4 = 8

34. ರಕ್ಷಿಸಬೇಕಾದವರೇ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?
35. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.
36. ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಹೇಗೆ ವಿವರಿಸಿದ್ದಾನೆ?
37. ಜನಪದರು ಹೇಳುವಂತೆ ನಮ್ಮ ನೆರೆಹೊರೆ ಹೇಗಿರಬೇಕು? ವಿವರಿಸಿ.

**ಆ. ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** 1 × 4 = 4

38. ಬಸಲಿಂಗ ಡಾ॥ ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು?
39. ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ಹೇಗೆ ನಿರೂಪಿಸಿದ್ದಾರೆ?
40. ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

**ಇ. ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** 1 × 4 = 4

41. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗ ಹಾಕಲು ಮಠದವರು ಹವಣಿಸಿದ್ದೇಕೆ?
42. ಬೀದಿನಾಯಿಗಳ ನಿವಾರಣೆಗೆ ಖಾನ್ ಸಾಹೇಬರು ತೆಗೆದುಕೊಂಡಿದ್ದ ಕ್ರಮಗಳಾವುವು?
43. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

ಉ – ವಿಭಾಗ

**V. ಅ. ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ.** 1 × 5 = 5

44. ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪ ಮಾಯ್ತು ಪತಿಭಕ್ತಿಯೊಳಾ!
ರೀ ವನಿತೆಯ ತೆಱದಿಂ ಸ
ದ್ಭಾವನೊಳಗೊಂಡ ಪುಣ್ಯವತಿಯರ್ ಸತಿಯರ್ ॥

(ಅಥವಾ)

ಶಿಲುಬೆಯೇರಿದ್ದಾನೆ ಜೀಸಸ್ ಗೋಡೆಯಲ್ಲಿ
ಬಾಗಿದ ಶಿರ
ಕುತ್ತಿಗೆಯಲಿ ಉಬ್ಬಿದೊಂದು ನರ
ಯಾತನೆಗೂ ಸಲ್ಲಾತನೇ ನುಡಿವ ಮುಖ ಮುದ್ರೆ
ತೆರದೆದೆ
ಎನ್ನುವಂತಿದೆ
ಕೊಲೆಗಡುಕ ಬರಬ್ಬನ ವಕಾಲತ್ತು ನಡೆಸಿದವರೆ
ಎಡಕೊಬ್ಬ ಬಲಕೊಬ್ಬ ಕಳ್ಳನ ತೂಗಿ ಸನ್ಮಾನಿಸಿದವರೆ
ಮನ್ನಿಸಲಿ ನಿಮ್ಮನ್ನು ಆ ದೇವರೆ

ಭಾಷಾಭ್ಯಾಸ

**VI. ಅ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ.** 6 × 2 = 12

45. ಎರಡು ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ: ಸಲಿಲ, ಭಾಸ್ಕರ, ಸಂಕುಲ
46. ಎರಡು ಪದಗಳಿಗೆ ತದ್ಭವ ರೂಪ ಬರೆಯಿರಿ: ವೀರ, ಸಂಸ್ಕೃತಿ, ಶ್ರೀ
47. ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ: ದಯಾಮೃತ್ಯು, ಹಸಿರು ಕಂಬಳಿ, ರಸಬಳ್ಳಿ
48. ಎರಡು ಪದಗಳಿಗೆ ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ: ಪರದೇಶಿ, ಗಾಳಿಸುದ್ದಿ, ದಾರಿದೀಪ
49. ಎರಡು ಪದಗಳಿಗೆ ವಿಭಕ್ತಿಯನ್ನು ಹೆಸರಿಸಿ: ರಾಮನಿಗೆ, ರಾವಣನ, ಧರ್ಮರಾಜನಲ್ಲಿ
50. ಎರಡು ಪದಗಳಿಗೆ ಧಾತು ರೂಪ ಬರೆಯಿರಿ: ಹೋದರು, ಓದಿದ್ದಳು, ಜಿಗಿಯುತ್ತಾರೆ
51. ಎರಡು ಪದಗಳಿಗೆ ನಿಷೇಧಾರ್ಥಕ ರೂಪಗಳನ್ನು ಬರೆಯಿರಿ: ಆಡಿದರು, ತಿನ್ನುವಳು, ಹೋದವು

**ಆ. ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ:** 1 × 5 = 5

52. ಹೆಚ್ಚುತ್ತಿರುವ ವೃದ್ಧಾಶ್ರಮಗಳು ಅಥವಾ ಮಾತೃಭಾಷೆಯಲ್ಲಿ ಶಿಕ್ಷಣ

**ಇ. ಪತ್ರಲೇಖನ: ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ:** 1 × 4 = 4

53. ನಿಮ್ಮ ಪರೀಕ್ಷಾ ಸಿದ್ಧತೆಯನ್ನು ತಿಳಿಸಿ ತಂದೆ ತಾಯಿಗೆ ಒಂದು ಪತ್ರವನ್ನು ಬರೆಯಿರಿ.

ಅಥವಾ

ವರ್ಗಾವಣೆ ಪ್ರಮಾಣಪತ್ರ ಮತ್ತು ಅಂಕಪಟ್ಟಿ ಕೋರಿ ಕಾಲೇಜಿನ ಪ್ರಾಚಾರ್ಯರಿಗೆ ಪತ್ರ ಬರೆಯಿರಿ.

**ಈ. ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ.** 1 × 4 = 4

54. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು. ಅಥವಾ
ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ

• • • • •